
# ಗುರುಕೃಪೆ



**ಕೆ**ಲಕೆಲವರು ಭಾವಿಸುತ್ತಾರೆ, "ನಾನು ಬದ್ಧಜೀವಿ. ನನಗೆ ಜ್ಞಾನ ಭಕ್ತಿ ದೊರೆಯುವುದಿಲ್ಲ" ಎಂದು. ಗುರುವಿನ ಕೃಪೆ ದೊರೆತದ್ದೇ ಆದರೆ, ಸ್ವಲ್ಪವೂ ಹೆದರಬೇಕಾಗಿಲ್ಲ. ಒಮ್ಮೆ ಒಂದು ಹೆಣ್ಣು ಹುಲಿ ಕುರಿಮಂದೆಯ ಮೇಲೆ ಬಿತ್ತು. ಅದು ತನ್ನ ಬೇಟೆಯ ಮೇಲೆ ಹಾರಿದಾಗ ಮರಿಹಾಕಿ ಸತ್ತುಹೋಯಿತು. ಬಳಿಕ ಮರಿ ಕುರಿಗಳೊಡನೆ ಬೆಳೆಯತೊಡಗಿತು. ಅವು ಹುಲ್ಲು ಮೇಯುತ್ತಿದ್ದುವು. ಹುಲಿಮರಿಯೂ ಹಾಗೆ ಹುಲ್ಲು ಮೇಯುತ್ತಿತ್ತು. ಅವು "ಬ್ಯಾ, ಬ್ಯಾ" ಎಂದು ಅರಚುತ್ತಿದ್ದವು. ಹುಲಿಮರಿಯೂ ಹಾಗೆಯೇ "ಬ್ಯಾ, ಬ್ಯಾ" ಅಂತ ಅರಚುತ್ತಿತ್ತು. ಕ್ರಮೇಣ ಹುಲಿಮರಿ ಬಹಳ ದೊಡ್ಡದಾಗಿ ಬೆಳೆಯಿತು. ಒಂದು ದಿನ ಅದೇ ಮಂದೆಯ ಮೇಲೆ ಇನ್ನೊಂದು ಹುಲಿ ಬಿದ್ದಿತು. ಆ ಮಂದೆಯೊಡನೆ ಹುಲ್ಲು ತಿನ್ನುವ ಹುಲಿ ಇರುವುದನ್ನು ಕಂಡು ಆ ಹುಲಿಗೆ ಬಹಳ ಆಶ್ಚರ್ಯವಾಯಿತು. ಅದು ಓಡಿ ಬಂದು ಆ ಹುಲ್ಲು ತಿನ್ನುತ್ತಿದ್ದ ಹುಲಿಯನ್ನು ಹಿಡಿದುಕೊಂಡಿತು. ಆಗ ಅದು "ಬ್ಯಾ, ಬ್ಯಾ" ಅಂತ ಅರಚತೊಡಗಿತು. ಕಾಡಿನ ಹುಲಿ ಆ ಹುಲ್ಲು ತಿನ್ನುವ ಹುಲಿಯನ್ನು ನೀರಿನ ಹತ್ತಿರಕ್ಕೆ ಎಳೆದುಕೊಂಡು ಹೋಗಿ ಹೇಳಿತು : "ಅಲ್ಲಿ ನೋಡು, ನೀರಿನಲ್ಲಿ ನಿನ್ನ ಮುಖ ನೋಡು. ಅದು ನನ್ನದರ ಹಾಗೆಯೇ ಇದೆ. ಇಲ್ಲಿ ಒಂದು ಚೂರು ಮಾಂಸದ ತುಂಡು ಇದೆ. ತಿನ್ನು ಇದನ್ನು." ಹೀಗೆಂದು ಹೇಳಿ ಬಲಾತ್ಕರಿಸಿ ಅದರ ಗಂಟಲೊಳಕ್ಕೆ ಆ ಮಾಂಸದ ತುಂಡನ್ನು ಹಾಕಿತು. ಅದು ಏನು ಮಾಡಿದರೂ ತಿನ್ನದೆ ಸುಮ್ಮನೆ "ಬ್ಯಾ, ಬ್ಯಾ" ಅಂತ ಅರಚುತ್ತಲೇ ಇತ್ತು. ಕ್ರಮೇಣ ಅದಕ್ಕೆ ರಕ್ತದ ರುಚಿ ಸಿಕ್ಕಿ, ಮಾಂಸವನ್ನು ತಿನ್ನಲಾರಂಭಿಸಿತು. ಆಗ ಕಾಡಿನ ಹುಲಿ ಹೇಳಿತು: "ನೋಡಿದೆಯೋ, ಈಗ ನನಗೂ ನಿನಗೂ ಯಾವ ಭೇದವೂ ಇಲ್ಲದಿರುವುದನ್ನು. ಈಗ ಬಾ, ಕಾಡಿಗೆ ನನ್ನೊಡನೆಯೇ ಬಂದು ಬಿಡು."

ಆದ್ದರಿಂದ ಗುರುವಿನ ಕೃಪೆ ದೊರೆತುದೇ ಆದರೆ, ಇನ್ನು ಹೆದರಬೇಕಾಗಿಲ್ಲ. ಆತ ತಿಳಿಸಿಕೊಡುತ್ತಾನೆ, ನೀನು ಯಾರು, ನಿನ್ನ ಸ್ವರೂಪ ಏನು ಎಂಬುದನ್ನು. ಒಂದು ಸ್ವಲ್ಪ ಸಾಧನೆ ಮಾಡಿದರೇನೇ ಗುರು ಎಲ್ಲವನ್ನೂ ವಿವರಿಸಿ ತಿಳಿಸಿಕೊಟ್ಟುಬಿಡುತ್ತಾನೆ. ಆಗ ಸಾಧಕನಿಗೇ ಗೊತ್ತಾಗುತ್ತದೆ, ಯಾವುದು ಸತ್ಯವಾದ್ದು, ಯಾವುದು ಅಸತ್ಯವಾದ್ದು ಎಂಬುದು. ಭಗವಂತನೇ ಸತ್ಯ, ಈ ಜಗತ್ತು ಅನಿತ್ಯ. ಗುರುವಿನ ಕೃಪೆಯಿಂದ ಬ್ರಹ್ಮಜ್ಞಾನ ದೊರೆತನಂತರ ಈ ಜಗತ್ತಿನಲ್ಲಿ ಜೀವನ್ಮುಕ್ತನಾಗಿ ಇರಲು ಸಾಧ್ಯ.

ರಾಮಾನುಜಾಚಾರ್ಯರು ವಿಶಿಷ್ಟಾದ್ವೈತವಾದಿಗಳು. ಆದರೆ ಅವರ ಗುರು ಅದ್ವೈತವಾದಿ. ಕೊನೆಗೆ ಅವರಿಬ್ಬರಿಗೂ ಹತ್ತಿಕೊಂಡಿತು. ಗುರುಶಿಷ್ಯರು ಪರಸ್ಪರ ಮತಖಂಡನೆ ಮಾಡಲು ಶುರು ಮಾಡಿದರು. ಹೀಗೆ ಯಾವಾಗಲೂ ಆಗುವುದುಂಟು. ಆದರೂ ಗುರುವಿಗೆ ಶಿಷ್ಯ ತನ್ನವನೇ.

ಒಬ್ಬ ಇನ್ನೊಬ್ಬನನ್ನು ಸಂಸಾರ ಬಂಧನದಿಂದ ಮುಕ್ತನನ್ನಾಗಿ ಮಾಡಲು ಸಾಧ್ಯವೇ? ಈ ಭುವನಮೋಹಿನಿ ಮಾಯೆ ಯಾರದೋ ಆತನೇ ಅದರಿಂದ ಮನುಷ್ಯರನ್ನು ಮುಕ್ತರನ್ನಾಗಿ ಮಾಡಬಲ್ಲ. ಸಚ್ಚಿದಾನಂದ ಗುರು ಒಬ್ಬನನ್ನು ಬಿಟ್ಟರೆ ಬೇರೆ ಯಾರೂ ಶರಣ್ಯರೇ ಇಲ್ಲ. ಯಾರು ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿಲ್ಲವೊ, ಯಾರಿಗೆ ಆತನಿಂದ ಆದೇಶ ದೊರೆತಿಲ್ಲವೊ, ಯಾರು ಭಗವಂತನ ಶಕ್ತಿಯಿಂದ ಶಕ್ತಿಯುತರಾಗಿಲ್ಲವೊ ಅವರ ಕೈಯಲ್ಲಿ ಜೀವರ ಭವ ಬಂಧನವನ್ನು ಬಿಡಿಸಲು ಎಂದಿಗಾದರೂ ಸಾಧ್ಯವಾಗುವುದೇ?

ಒಂದು ದಿನ ಪಂಚವಟಿಯ ಮಾರ್ಗವಾಗಿ ಸರ್ವೆಮರಗಳ ತೋಪಿನ ಕಡೆ ನಾನು ಹೋಗುತ್ತಿದ್ದಾಗ, ಒಂದು ಗೂಳಿಗಪ್ಪೆ ಬಹಳವಾಗಿ ಕೂಗುತ್ತಿದ್ದುದು ನನ್ನ ಕಿವಿಗೆ ಬಿತ್ತು. ಅದನ್ನು ಹಾವು ಹಿಡಿದಿರಬೇಕು ಅಂತ ಭಾವಿಸಿದೆ. ತೋಪಿನಲ್ಲಿ ಸ್ವಲ್ಪ ಹೊತ್ತು ಇದ್ದು ಬಳಿಕ ಹಿಂದಿರುಗಿ ಪಂಚವಟಿಗೆ ಬಂದಾಗ, ಏನು ಸಮಾಚಾರ ಎಂಬುದಾಗಿ ಹುಡುಕಿ ನೋಡಿದಾಗ, ಒಂದು ನೀರು ಹಾವು ಅದನ್ನು ಹಿಡಿದುಕೊಂಡಿದೆ. ಹಾವಿನ ಕೈಯಲ್ಲಿ ಅದನ್ನು ನುಂಗುವುದಕ್ಕೂ ಆಗುತ್ತಿಲ್ಲ, ಉಗುಳುವುದಕ್ಕೂ ಆಗುತ್ತಿಲ್ಲ. ಆದ್ದರಿಂದ ಕಪ್ಪೆಗೆ ತಾಳಲಾರದ ಸಂಕಟ. ಆಗ ನನಗನ್ನಿಸಿತು, ಅದನ್ನೇನಾನಾದರೂ ನಾಗರಹಾವು ಹಿಡಿದಿದ್ದೇ ಆಗಿದ್ದರೆ, ಅತಿ ಹೆಚ್ಚೆಂದರೆ ಅದು ಮೂರು ಸಲ ಕೂಗುವುದರೊಳಗೇ ಅದರ ಆಟ ಮುಗಿದು ಹೋಗುತ್ತಿತ್ತು. ಆದರೆ ಅದು ಕೇವಲ ನೀರುಹಾವು ಆಗಿದ್ದುದರಿಂದ ಅದಕ್ಕೂ ಪ್ರಾಣಸಂಕಟ, ಕಪ್ಪೆಗೂ ಪ್ರಾಣಸಂಕಟ. ಸದ್ಗುರುವಿನ ಕೈಗೆ ಸಿಕ್ಕಿದ್ದೇ ಆದರೆ ಜೀವರ "ಅಹಂ" ಎಂಬುದು ಮೂರು ಸಲ ಕೂಗಿಕೊಳ್ಳುವುದರಲ್ಲೇ ಅದರ ಹುಟ್ಟು ಅಡಗಿ ಹೋಗುತ್ತದೆ. ಆದರೆ ಗುರು "ಅಪಕ್ವ" ಮನುಷ್ಯನಾಗಿದ್ದರೆ ಆತನಿಗೂ ಪ್ರಾಣಸಂಕಟ, ಶಿಷ್ಯನಿಗೂ ಪ್ರಾಣಸಂಕಟ. ಶಿಷ್ಯನ ಅಹಂಕಾರವೂ ನಾಶವಾಗುವ ಹಾಗಿಲ್ಲ; ಭವಬಂಧನವೂ ಕಡಿದು ಹೋಗುವ ಹಾಗಿಲ್ಲ. ಶಿಷ್ಯ "ಅಪಕ್ವ" ಗುರುವಿನ ಕೈಗೆ ಬಿದ್ದುದೇ ಆದರೆ ಆತನಿಗೆ ಮುಕ್ತಿ ದೊರಕದು.

ಈ ಮಾಯೆ ಎಂದರೆ "ಅಹಂ" ಎಂಬುದು, ಒಂದು ಚೂರು ಮೋಡವಿದ್ದ ಹಾಗೆ. ಈ ಚೂರು ಮೋಡದ ದೆಸೆಯಿಂದ ಸೂರ್ಯನನ್ನು ನೋಡಲಾಗುವುದಿಲ್ಲ; ಅದು ಸರಿದು ಹೋದೊಡನೆಯೇ ಸೂರ್ಯ ಕಾಣಿಸಿಕೊಳ್ಳುತ್ತಾನೆ. ಗುರುವಿನ ಕೃಪೆಯಿಂದ ಈ "ಅಹಂ" ಎಂಬುದು ನಾಶವಾಯಿತು ಎಂದರೆ ಭಗವಂತನ ದರ್ಶನ ದೊರೆತುಬಿಡುತ್ತದೆ.

**ಭಗವಂತ ಗುರುವಿನ ರೂಪವನ್ನು ಧರಿಸಿ, ತಾನೇ ಮುಂದೆ ಬಂದು ಜೀವಿಯ ಪಾಶವನ್ನು ಕತ್ತರಿಸಿ ಹಾಕುವುದಾದರೆ, ಆಗ ಜೀವಿ ಭಯಪಡಬೇಕಾದ್ದೇನಿಲ್ಲ.** **(ಶ್ರೀರಾಮಕೃಷ್ಣ ವಚನವೇದ ದಿಂದ)**